## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ವಿಪತ್ತು ಸ್ಪಂದನಾ ಪಡೆ (State Disaster Response Force-SDRF)ಯ 'ಡಿ' ಕಂಪನಿ, ಕಲಬುರ್ಗಿ ಇಲ್ಲಿಗೆ ಸಿಬ್ಬಂದಿಗಳ ಸೃಜಿಸುವ ಕುರಿತು.

ಓದಲಾಗಿದೆ:-

1) ಸರ್ಕಾರದ ಆದೇಶ ಸಂಖ್ಯೆ: ಒಇ 183 ಕಲಸೇ 2012, ದಿನಾಂಕ 14-06-2013.
2) ಸರ್ಕಾರದ ಆದೇಶ ಸಂಖ್ಯೆ: ಒಇ 132 ಕಲಸೇ 2012, ದಿನಾಂಕ 16-07-2014.
3) ಸರ್ಕಾರದ ಆದೇಶ ಸಂಖ್ಯೆ: ಒಇ 01 ಕಲಸೇ 2015, ದಿನಾಂಕ 12-02-2016.
4) ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆ, ಬೆಂಗಳೂರುರವರ ಪತ್ರ ಸಂಖ್ಯೆ :ಎಸ್‌ಡಿಆರ್‌ಎಫ್/33/ಡಿಜಪಿ/2015-16, ದಿನಾಂಕ: 21-1-2016 ಹಾಗೂ 22-6-2016.

***

ಪ್ರಸ್ತಾವನೆ:-

1. ಮೇಲೆ ಓದಲಾದ (1)ರ ಆದೇಶದಲ್ಲಿ ಈ ಕೆಳಕಂಡ ರಾಜ್ಯ ವಿಪತ್ತು ಸ್ಪಂದನಾ ಪಡೆಗಳನ್ನು 2013-15ನೇ ಸಾಲಿನ ಅವಧಿಯಲ್ಲಿ ರಚಿಸಲು ಸರ್ಕಾರವು ಮಂಜೂರಾತಿಯನ್ನು ನೀಡಿತ್ತು:

1. ಎಸ್‌ಡಿಆರ್‌ಎಫ್ 'ಎ' ಕಂಪನಿ – ತರಬೇತಿ ಕೇಂದ್ರ/ನಗರ ವಿಪತ್ತು ಸ್ಪಂದನಾ ಪಡೆ, ಬೆಂಗಳೂರು ಕೇಂದ್ರ ಸ್ಥಾನ.
2. ಎಸ್‌ಡಿಆರ್‌ಎಫ್ 'ಬಿ' ಕಂಪನಿ – ಮಂಗಳೂರು ಕೇಂದ್ರ ಸ್ಥಾನ
3. ಎಸ್‌ಡಿಆರ್‌ಎಫ್ 'ಸಿ' ಕಂಪನಿ – ಬೆಳಗಾವಿ ಕೇಂದ್ರ ಸ್ಥಾನ
4. ಎಸ್‌ಡಿಆರ್‌ಎಫ್ 'ಡಿ' ಕಂಪನಿ – ಗುಲ್ಬರ್ಗಾ ಕೇಂದ್ರ ಸ್ಥಾನ

2. ಮೇಲೆ ಓದಲಾದ (2)ರ ಆದೇಶದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಎ' ಕಂಪನಿಗೆ ವಿವಿಧ ವೃಂದದ 127 ಹುದ್ದೆಗಳನ್ನು ಸೃಜಿಸಲಾಗಿತ್ತು.

3. ತದನಂತರ ಮೇಲೆ ಓದಲಾದ (3)ರ ಆದೇಶದಲ್ಲಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಬಿ' ಮತ್ತು 'ಸಿ' ಕಂಪನಿಗಳಿಗೆ ತಲಾ ಒಂದು ಕಂಪನಿಗೆ 127 ಹುದ್ದೆಗಳಂತೆ ಒಟ್ಟು ಎರಡು ಕಂಪನಿಗಳಿಗೆ ವಿವಿಧ ವೃಂದದ 254 ಹುದ್ದೆಗಳನ್ನು ಸೃಜಿಸಲಾಗಿತ್ತು.

4. ಮೇಲೆ ಓದಲಾದ (4)ರ ಪತ್ರಗಳಲ್ಲಿ ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಪ್ರಸ್ತುತ ಕಲಬುರ್ಗಿ 'ಡಿ' ಕಂಪನಿಯನ್ನು ಪ್ರಾರಂಭಿಸುವ ಸಲುವಾಗಿ ಜಿಲ್ಲಾಧಿಕಾರಿಗಳು ಕಲಬುರ್ಗಿ ಇವರು ಕಲಬುರ್ಗಿಯಲ್ಲಿ ಈಗಾಗಲೇ ರಾಜ್ಯ ವಿಪತ್ತು ಸ್ಪಂದನಾ [illegible] ಹಾಗೂ ಈ ಜಮೀನಿಗೆ ಕಾಂಪೌಂಡ್ ಗೋಡೆ

Scanned with CamScanner

...ವಿಶೇಷ ಸಂರಕ್ಷಣಾ ಪಡೆಯ ಕಲಬುರಗಿ
...ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು [illegible] ಸದರಿ ಕಂಪನಿಗೆ ಅವಶ್ಯವಿರುವ 127
3 ಕಂಪನಿಯನ್ನು 2016–17ನೇ ಸಾಲಿನಲ್ಲಿ ಪ್ರಾರಂಭಿಸಲು. ಸದರಿ ಕಂಪನಿಗೆ ಅವಶ್ಯವಿರುವ 127 ಹುದ್ದೆಗಳನ್ನು ಈ ಕೆಳಕಂಡಂತೆ ಸೃಜಿಸಬೇಕಾಗಿರುತ್ತದೆ. ಅದರ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರಸಂ | ಹುದ್ದೆ (ವೃಂದವಾರು) | ನಿಯೋಜನೆಯ ಮೇರೆಗೆ | | | ಒಂದು ಕಂಪನಿಗೆ |
|---|---|---|---|---|---|
| | ಮೆಡಿಕಲ್ ಆಫೀಸರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | | 01 | 01 |
| | | ಕೆಎಸ್‌ಐಎಸ್‌ಎಫ್ | ಕೆಎಸ್‌ಆರ್‌ಪಿ | ಅಗ್ನಿಶಾಮಕ ಇಲಾಖೆ | |
| 1 | ಡೆಪ್ಯೂಟಿ ಕಮಾಂಡೆಂಟ್ (ಕಂಪನಿ ಕಮಾಂಡರ್) | – | 01 | – | 01 |
| 2 | ಇನ್ಸ್‌ಪೆಕ್ಟರ್ (2–I/C) | – | 01 | – | 01 |
| 3 | ಇನ್ಸ್‌ಪೆಕ್ಟರ್ ಜಿಡಿ – ಟೀಮ್ ಕಮಾಂಡರ್ | 03 | – | – | 03 |
| 4 | ಸಬ್ ಇನ್ಸ್‌ಪೆಕ್ಟರ್ ಜಿಡಿ | 07 | – | – | 07 |
| 5 | ಸಬ್ ಇನ್ಸ್‌ಪೆಕ್ಟರ್ (ಇಂಜನಿಯರಿಂಗ್ ಸ್ಟಿರ್) | – | 06 | – | 06 |
| 6 | ಸಬ್ ಇನ್ಸ್‌ಪೆಕ್ಟರ್ – ಆರ್‌ಓ | – | 03 | – | 03 |
| 7 | ಹೆಚ್.ಸಿ/ಎಲ್.ಎಫ್.ಎಂ – ಜಿಡಿ | 04 | 04 | 02 | 10 |
| 8 | ಹೆಚ್.ಸಿ/ಎಲ್.ಎಫ್.ಎಂ – ಆರ್‌ಓ | – | 02 | 01 | 03 |
| 9 | ಹೆಚ್.ಸಿ/ಎಲ್.ಎಫ್.ಎಂ. – ಎಲೆಕ್ಟ್ರಿಕಲ್ | – | 06 | 03 | 09 |
| 10 | ಹೆಚ್.ಸಿ/ಎಲ್.ಎಫ್.ಎಂ – ಟೆಕ್ನಿಕಲ್ | – | 02 | 01 | 03 |
| 11 | ಕಾನ್ಸ್‌ಟೇಬಲ್/ಎಫ್.ಎಂ–ಜಿಡಿ | 29 | 21 | 11 | 61 |
| 12 | ಹೆಚ್.ಸಿ/ಎಲ್.ಎಫ್.ಎಂ – ಡ್ರೈವರ್ಸ್ | 01 | 02 | 01 | 04 |
| 13 | ಕಾನ್ಸ್‌ಟೇಬಲ್/ಎಫ್.ಎಂ– ಡ್ರೈವರ್ಸ್ | 03 | 04 | 02 | 09 |
| 14 | ಫಾಲೋಯರ್ | 03 | 03 | – | 06 |

Scanned with CamScanner

5. ಮೇಲ್ಕಂಡ ಹುದ್ದೆಗಳು ನಿಯೋಜನಾ ಹುದ್ದೆಗಳಾಗಿರುವುದರಿಂದ, ಕರ್ನಾಟಕ ರಾಜ್ಯ ಮೀಸಲು ಪೊಲೀಸ್ (ಕೆಎಸ್‌ಆರ್‌ಪಿ) ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ (ಕೆಎಸ್‌ಐಎಸ್‌ಎಫ್) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ನಿಯೋಜನಾ ಮೀಸಲು ಹುದ್ದೆಗಳಾಗಿದ್ದು, ಈ ನಾಲ್ಕು ಇಲಾಖೆಗಳಲ್ಲಿ ಈ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿರುತ್ತದೆ. ರಾಜ್ಯ ವಿಪತ್ತು ಸ್ಪಂದನಾ ಪಡೆಗೆ ನಿಯೋಜನೆಯಿಂದ ಉಂಟಾಗುವ ರಿಕ್ತ ಸ್ಥಾನಗಳನ್ನು ಈ ನಾಲ್ಕು ಇಲಾಖೆಗಳು ನೇರ ನೇಮಕಾತಿ/ಬಡ್ತಿ ಮೂಲಕ ಭರ್ತಿ ಮಾಡಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿ ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಡಿ' ಕಂಪನಿಗೆ ಅವಶ್ಯವಿರುವ 127 ಹುದ್ದೆಗಳನ್ನು ಸೃಜಿಸಿ ಆದೇಶ ಹೊರಡಿಸಲು ಕೋರಿದ್ದಾರೆ.

6. ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳು ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರುರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

<u>ಸರ್ಕಾರದ ಆದೇಶ ಸಂಖ್ಯೆ: ಒಇ 84 ಕಅಸೇ 2016, ದಿನಾಂಕ: 26–08–2016</u>

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನಲೆಯಲ್ಲಿ, ರಾಜ್ಯ ವಿಪತ್ತು ಸ್ಪಂದನಾ ಪಡೆಯ 'ಡಿ' ಕಂಪನಿಗೆ ಅವಶ್ಯವಿರುವ 127 ಹುದ್ದೆಗಳನ್ನು ನಿಯೋಜನೆ ಮೂಲಕ ಭರ್ತಿ ಮಾಡುವ ಷರತ್ತಿಗೊಳಪಟ್ಟು ಸೃಜಿಸಲು ಸರ್ಕಾರವು ಮಂಜೂರಾತಿ ನೀಡಿದೆ.

| ಕ್ರಸಂ. | ಹುದ್ದೆ (ವೃಂದವಾರು) | ನಿಯೋಜನೆಯ ಮೇರೆಗೆ | | | ಒಂದು ಕಂಪನಿಗೆ |
|---|---|---|---|---|---|
| | ಮೆಡಿಕಲ್ ಆಫೀಸರ್ | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | | 01 | 01 |
| | | ಕೆಎಸ್‌ಐಎಸ್‌ಎಫ್ | ಕೆಎಸ್‌ಆರ್‌ಪಿ | ಅಗ್ನಿಶಾಮಕ ಇಲಾಖೆ | |
| 1 | ಡೆಪ್ಯುಟಿ ಕಮಾಂಡೆಂಟ್ (ಕಂಪನಿ ಕಮಾಂಡರ್) | – | 01 | – | 01 |
| 2 | ಇನ್ಸ್‌ಪೆಕ್ಟರ್ (2–I/C) | – | 01 | – | 01 |
| 3 | ಇನ್ಸ್‌ಪೆಕ್ಟರ್ ಜಿಡಿ – ಟೀಮ್ ಕಮಾಂಡರ್ | 03 | – | – | 03 |
| 4 | ಸಬ್ ಇನ್ಸ್‌ಪೆಕ್ಟರ್ ಜಿಡಿ | 07 | – | – | 07 |
| 5 | ಸಬ್ ಇನ್ಸ್‌ಪೆಕ್ಟರ್ (ಇಂಜಿನಿಯರಿಂಗ್ ಸಿವಿಲ್) | – | 06 | – | 06 |
| 6 | ಸಬ್ ಇನ್ಸ್‌ಪೆಕ್ಟರ್ – ಆರ್‌ಟಿ | – | 03 | – | 03 |
| 7 | ಹೆಚ್.ಸಿ/ಎಲ್.ಎಫ್.ಎಂ – ಜಿಡಿ | 04 | 04 | 02 | 10 |
| 8 | ಹೆಚ್.ಸಿ/ಎಲ್.ಎಫ್.ಎಂ | – | 02 | 01 | 03 |

Scanned with CamScanner

| | | | | | |
|---|---|---|---|---|---|
| | –ಆರ್‌ಓಟಿ | | | | |
| 9 | ಹೆಚ್.ಸಿ/ಎಲ್.ಎಫ್.ಎಂ –ಎಲೆಕ್ಟ್ರಿಕಲ್ | | 06 | 03 | 09 |
| 10 | ಹೆಚ್.ಸಿ/ಎಲ್.ಎಫ್.ಎಂ –ಟೆಕ್ನಿಕಲ್ | – | 02 | 01 | 03 |
| 11 | ಕಾನ್ಸ್ ಟೇಬಲ್/ಎಫ್.ಎಂ–ಜಿಡಿ | 29 | 21 | 11 | 61 |
| 12 | ಹೆಚ್.ಸಿ/ಎಲ್.ಎಫ್.ಎಂ –ಡ್ರೈವರ್ಸ್ | 01 | 02 | 01 | 04 |
| 13 | ಕಾನ್ಸ್ ಟೇಬಲ್/ಎಫ್.ಎಂ–ಡ್ರೈವರ್ಸ್ | 03 | 04 | 02 | 09 |
| 14 | ಫಾಲೋಯರ್ಸ್ | 03 | 03 | – | 06 |
| | ಒಟ್ಟು | 50 | 55 | 21 | 127 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 320 ವೆಚ್ಚ–11/2016, ದಿನಾಂಕ: 16–08–2016 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

21/8/16
(ಬಿ.ಎನ್.ದೇವರಾಜ್,)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ),
ಒಳಾಡಳಿತ ಇಲಾಖೆ,
(ಪೊಲೀಸ್ ಸಹಾಯಕ ಸೇವೆಗಳು)

ಇವರಿಗೆ,

1) ಪ್ರಧಾನ ಮಹಾ ಲೇಖಪಾಲರು(ಜಿ&ಎಸ್.ಎಸ್.ಎ), (ಇ&ಎಸ್.ಎಸ್.ಎ) ಮತ್ತು (ಎ&ಇ) ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು.
2) ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮಹಾ ನಿರ್ದೇಶಕರು, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ ಹಾಗೂ ರಾಜ್ಯ ವಿಪತ್ತು ಸ್ಪಂದನಾ ಪಡೆಯ ಮುಖ್ಯಸ್ಥರು, ನಂ.1, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ, ಬೆಂಗಳೂರು.
3) ಜಂಟಿ ನಿರ್ದೇಶಕರು / ಉಪ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4) ಶಾಖಾ ರಕ್ಷ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1) ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಿಸಿಎಎಸ್) ರವರ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ವಿಧಾನ ಸೌಧ, ಬೆಂಗಳೂರು.

..5

Scanned with CamScanner